# ಜಿಯಾ ಖಾನ್ ನೆನಪು

2015ರಲ್ಲಿ ಮಗಳು ಜಿಯಾ ಖಾನ್‌ಳನ್ನು ಕಳೆದುಕೊಂಡ ತಾಯಿ ರಾಬಿಯಾ ಖಾನ್ ಈಗ ಮತ್ತೊಮ್ಮೆ ಬಾಯಿಬಿಟ್ಟಿದ್ದಾರೆ. 'ನನ್ನ ಮಗಳನ್ನು ಬಾಲಿವುಡ್‌ನ ಕೆಲವು ಘಟಾನುಘಟಿಗಳು ಹೀಗೆಯೇ ಬಲಿ ತೆಗೆದುಕೊಂಡರು. ಆಕೆಯ ಆತ್ಮಹತ್ಯೆಗೆ ಕಾರಣನಾದ ನಟ ಆದಿತ್ಯ ಪಾಂಚೋಲಿಯನ್ನು ಪೊಲೀಸ್ ತನಿಖೆಯಿಂದ ರಕ್ಷಿಸಿದರು' ಎಂದು ಆಕೆ ಹಳೆಯ ಘಟನೆಗಳನ್ನು ನೆನಪಿಸಿಕೊಂಡಿದ್ದಾರೆ.

ಸಿಬಿಐ ಆಫೀಸರ್ ರಾಬಿಯಾ ಅವರನ್ನು ಲಂಡನ್ನಿನಿಂದ ಕರೆಸಿಕೊಂಡರಂತೆ. 'ನಿಮ್ಮ ಮಗಳ ಸಾವಿಗೆ ಸಂಬಂಧಿಸಿ ಕೆಲವು ಸಾಕ್ಷ್ಯಗಳು ಸಿಕ್ಕಿವೆ. ದಯವಿಟ್ಟು ಬನ್ನಿ' ಎಂದ ಅಧಿಕಾರಿಯ ಮಾತು ಕೇಳಿ ರಾಬಿಯಾ ಮುಂಬೈಗೆ ಬಂದಿದ್ದಾರೆ. ಸಿಬಿಐ ಕಚೇರಿಗೆ ಹೋದಾಗ ಆ ಅಧಿಕಾರಿ ರಾಬಿಯಾರನ್ನು ಮುಂದೆ ಕೂರಿಸಿಕೊಂಡು, 'ಆದಿತ್ಯ ಪಾಂಚೋಲಿಯ ಸಿನಿಮಾಗಳ ಮೇಲೆ ಸಲ್ಮಾನ್ ಖಾನ್ ತುಂಬಾ ಬಂಡವಾಳ ಹೂಡಿದ್ದಾರೆ. ಆತನಿಗೆ ತೊಂದರೆ ಕೊಡಬೇಡಿ ಎಂದು ಸಲ್ಮಾನ್‌ಖಾನ್ ಪದೇ ಪದೇ ಫೋನ್ ಮಾಡುತ್ತಿದ್ದಾರೆ. ಏನು ಮಾಡೋಣ?' ಎಂದು ಪ್ರಶ್ನಿಸಿದರಂತೆ.

'ಸುಶಾಂತ್‌ಸಿಂಗ್ ಸಾವಿನ ಕುರಿತ ತನಿಖೆಯೂ ನಿಷ್ಪಕ್ಷಪಾತವಾಗಿ ನಡೆಯುತ್ತದೆ ಅನ್ನಿಸುತ್ತಿಲ್ಲ. ಬಾಲಿವುಡ್‌ನಲ್ಲಿ ಒತ್ತಡ ತಂತ್ರಗಳನ್ನು ಹೇರುವ ಪಟ್ಟಭದ್ರರಿಗೆ ಯಾರೂ ಬಗ್ಗಬಾರದು' ಎಂದೂ ರಾಬಿಯಾ ಖಾನ್ ಒತ್ತಾಯಿಸಿದ್ದಾರೆ. ಸುಶಾಂತ್ ಆತ್ಮಹತ್ಯೆಯ ಕುರಿತು ಬಾಲಿವುಡ್ ದೊಡ್ಡ ತಾರೆಯರು ಇದುವರೆಗೂ ಒಂದು ಮಾತನ್ನೂ ಆಡಿಲ್ಲದಿರುವುದು ನೋಡಿದರೆ ರಾಬಿಯಾ ಅನುಮಾನ ನಿಜ ಅನಿಸುತ್ತಿದೆ. ■



# ಸುಶಾಂತ್ ಕಲಿಸಿದ ಪಾಠ

ಸುಶಾಂತ್‌ಸಿಂಗ್ ರಜಪೂತ್ ಎಂಬ ಸ್ಫುರದ್ರೂಪಿ ನಟನ ಆತ್ಮಹತ್ಯೆ ಬಾಲಿವುಡ್‌ನಲ್ಲಿ ಅಲ್ಲೋಲ ಕಲ್ಲೋಲ ಉಂಟು ಮಾಡಿದೆ. ಹೊಸಬರಿಗೆ, ಪ್ರತಿಭಾವಂತರಿಗೆ ಬಾಲಿವುಡ್‌ನಲ್ಲಿ ಉಸಿರುಗಟ್ಟಿಸುವ ವಾತಾವರಣ ಇದೆ ಎನ್ನುವುದು ಮತ್ತೆ ಮತ್ತೆ ಸಾಬೀತಾಗುತ್ತಿದೆ. ಸುಶಾಂತ್‌ಗೆ ಹತ್ತಿರವಾಗಿದ್ದ, ಸುಶಾಂತ ಜೊತೆಗೆ ನಟಿಸಿದ ನಟ ನಟಿಯರು ಮಾತ್ರವಲ್ಲ, ಸುಶಾಂತ್‌ನನ್ನು ದೂರದಿಂದ ನೋಡಿದಂತಹ ನಟರೂ ಈ ಉಸಿರುಗಟ್ಟಿಸುವ ವಾತಾವರಣದ ಬಗ್ಗೆ ಕಿಡಿ ಕಾರುತ್ತಿದ್ದಾರೆ. ದೂರದ ಪಾಟ್ನಾದಿಂದ ಮುಂಬೈಗೆ ಬಂದು, ರಂಗಭೂಮಿಯಲ್ಲಿ ಪ್ರತಿಭೆಯನ್ನು ಪ್ರದರ್ಶಿಸಿ ಬಾಲಿವುಡ್ ಒಳಕ್ಕೆ ಕಷ್ಟಪಟ್ಟು ಪ್ರವೇಶ ಪಡೆದಾತ ಈ ಸುಶಾಂತ್. ಎಂಜಿನಿಯರಿಂಗ್‌ನಲ್ಲಿ ರ್‍ಯಾಂಕ್ ಹೋಲ್ಡರ್. ನಿಕಟವರ್ತಿಗಳ ಪ್ರಕಾರ ಉನ್ನತ ವಿದ್ಯಾಭ್ಯಾಸಕ್ಕೆ ವಿದೇಶೀ ಯೂನಿವರ್ಸಿಟಿಯ ಸ್ಕಾಲರ್‌ಷಿಪ್ ಸಿಕ್ಕಿತ್ತು. ಆದರೆ ನಟನೆಯ ಮೇಲಿನ ಮೋಹದಿಂದ ಮುಂಬೈನಲ್ಲೇ ಉಳಿದ. ಬಾಲಿವುಡ್‌ನಲ್ಲಿ ನಡೆಯುತ್ತಿರುವ ವಶೀಲಿಬಾಜಿ, ಸ್ವಜನಪಕ್ಷಪಾತ ಎಲ್ಲದರಿಂದ ರೋಸಿಹೋಗಿ ಕೊನೆಗೆ ನೇಣಿಗೆ ಶರಣಾದ.

ಈಗ ಎಲ್ಲರೂ ಆತ ನಟಿಸಿದ 'ಚಿಚ್ಚೋರೆ' ಎನ್ನುವ ಸಿನಿಮಾದ ಕುರಿತು ಮಾತನಾಡುತ್ತಿದ್ದಾರೆ. ಆ ಚಿತ್ರದಲ್ಲಿ ಆತ್ಮಹತ್ಯೆಯ ವಿಫಲ ಯತ್ನ ನಡೆಸಿ ಆಸ್ಪತ್ರೆ ಸೇರಿದ ಮಗನನ್ನು ಬದುಕಿನ ಕಡೆಗೆ ಮತ್ತೆ ಮುಖ ಮಾಡುವಂತೆ ಯತ್ನಿಸುವ ಅಪ್ಪನ ಪಾತ್ರ. ತನ್ನ ಚಿತ್ರದ ಪಾತ್ರಕ್ಕೆ ತದ್ವಿರುದ್ಧವಾಗಿ ಬದುಕಿನಲ್ಲಿ ಕೈಚೆಲ್ಲಿದ ಸುಶಾಂತ್. ನಟನಾಗಿ, ಡಾನ್ಸರ್ ಆಗಿ ಸುಶಾಂತ್‌ಗೆ ಒಳ್ಳೆಯ ಹೆಸರಿತ್ತು. ಆದರೆ ತನ್ನ ವಿರುದ್ಧ ನಡೆಯುತ್ತಿದ್ದ ಪಿತೂರಿಗಳನ್ನು ಎದುರಿಸುವ ದೃಢಮನಸ್ಸು ಇಲ್ಲದೆ ಹೋಯಿತು.

ಬಾಲಿವುಡ್‌ನಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಇತರ ನಟ ನಟಿಯರು ಸುಶಾಂತ್‌ನ ಅನುಭವದಿಂದ ಕಲಿಯಬೇಕಾದ ಪಾಠವೆಂದರೆ ಶರಣಾಗಬಾರದು, ಇದ್ದು ಹೋರಾಡಬೇಕು, ಜೈಸಬೇಕು. ಬಾಲಿವುಡ್‌ನಲ್ಲಿ ಕುಟುಂಬದ ಹಿನ್ನೆಲೆಯಿಂದ ಅವಕಾಶ ಪಡೆದವರೂ ಎಲ್ಲರೂ ಸೂಪರ್‌ಸ್ಟಾರ್‌ಗಳಾಗಿಲ್ಲ, ಅವರಲ್ಲಿ ಈಗ ಸೂಪರ್‌ಸ್ಟಾರ್ ಆದವರೂ ಆರಂಭದಲ್ಲಿ ಸಾಕಷ್ಟು ಸೋಲುಗಳನ್ನು ಉಂಡು ಬಳಲಿದವರೇ ಎನ್ನುವುದನ್ನು ಮರೆಯಬಾರದು.

■ ಬಿಂದು

